ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವುದು.

795 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಉನ್ನತೀಕರಿಸಲು ಕೇಂದ್ರಕ್ಕೆ ಶಿಪಾರ್ಸು ಮಾಡಲಾಗಿರುವ ರಾಜ್ಯ ಹೆದ್ದಾರಿಗಳು ಯಾವುವು?

ಆ) ಉನ್ನತೀಕರಣಕ್ಕೆ ಪ್ರಸ್ತಾಪಿಸಲಾದ ರಾಜ್ಯ ರಸ್ತೆಗಳ ಉದ್ದ ಎಷ್ಟು? (ಕಿ.ಮೀಟರ್‌ಗಳಲ್ಲಿ)

ಇ) ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೇಂದ್ರವು ಒಪ್ಪಿರುವ ರಾಜ್ಯ ಹೆದ್ದಾರಿಗಳು ಯಾವುವು?

ಈ) ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಲು ತೆಗೆದುಕೊಳ್ಳಲಾಗುವ ಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) 4,400 ಕಿ. ಮೀಟರುಗಳು.

ಇ) ಯಾವುವು ಇಲ್ಲ.

ಈ) ಈ ವಿಷಯದಲ್ಲಿ, ರಾಜ್ಯ ಲೋಕೋಪಯೋಗಿ ಇಲಾಖೆ ಹಾಗೂ ಕರ್ನಾಟಕ ಮುಖ್ಯ ಮಂತ್ರಿಗಳು, ಲೋಕೋಪಯೋಗಿ ಇಲಾಖೆ ಸಚಿವರು ಮತ್ತು ಹಲವಾರು ಕರ್ನಾಟಕದಲ್ಲಿನ ಲೋಕಸಭಾ ಸದಸ್ಯರುಗಳು ಹಲವು ಸಚಿವರ : ಅಧಿಕಾರಿಗಳ ಮಟ್ಟದ ಸಭೆಗಳಲ್ಲಿ ಮುಖತ: ಮತ್ತು ಆರೆ ಸರ್ಕಾರಿ ಪತ್ರ ಮುಖೇನ ಕೇಂದ್ರ ಸರ್ಕಾರವನ್ನು ಪ್ರಧಾನ ಮಂತ್ರಿಗಳನ್ನು ಮತ್ತು ಭೂಸಾರಿಗೆ ಸಚಿವರನ್ನು ಬಹಳವಾಗಿ ಒತ್ತಾಯಪಡಿಸಿರುತ್ತಾರೆ. ಪ್ರಸ್ತಾವನೆಗಳನ್ನು ಮಂಜೂರು ಮಾಡುವವರೆವಿಗೂ ಇದೇ ಪ್ರಯತ್ನಗಳನ್ನು ಮುಂದುವರೆಸಲಾಗುತ್ತದೆ.

ಪಟ್ಟಿ		
ಕ್ರ ಸಂ.	ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು	ಉದ್ದ (ಕಿ.ಮೀ)
1.	ಆಂಧ್ರಪ್ರದೇಶದ ಗೂಟಿಯಿಂದ ಗುಂಟಕಲ್ - ಬಳ್ಳಾರಿ - ಹೊಸಪೇಟೆ - ಕೊಪ್ಪಳ - ಗದಗ್ - ಹುಬ್ಬಳ್ಳಿ - ಕಾರವಾರ (ಇವುಗಳನ್ನು ಸೇರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-17)	422
2.	ಬೆಂಗಳೂರು - ಮೈಸೂರು - ನಂಜನಗೂಡು - ಗುಂಡ್ಲುಪೇಟೆ - ಊಟಿ - ಕೊಯಮತ್ತೂರು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 47 ತಮಿಳುನಾಡಿನಲ್ಲಿ ಸೇರುವಂತೆ	220
3.	ಮೈಸೂರು - ಶ್ರೀರಂಗಪಟ್ಟಣ - ನಾಗಮಂಗಲ - ಚಿಕ್ಕನಾಯಕನಹಳ್ಳಿ - ಹುಳಿಯಾರ್ - ಹಿರಿಯೂರ್ - ಬಳ್ಳಾರಿ - ಷಹಪುರ - ಗುಲ್ಬರ್ಗ - ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	678
4.	ತುಮಕೂರು - ಅರಸಿಕೆರೆ - ಶಿವಮೊಗ್ಗ - ಸಾಗರ - ಹೊನ್ನಾವರ - (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	332
5.	ಬೆಂಗಳೂರು - ಮೈಸೂರು- ಮಡಿಕೇರಿ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	385
6.	ಬೆಳಗಾಂ - ಬಿಜಾಪುರ - ಗುಲ್ಬರ್ಗಾ - ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	364
7.	ಬೆಳಗಾಂ - ಬಾಗಲಕೋಟೆ - ರಾಯಚೂರು - ಮೆಹಬೂಬ್‌ನಗರ (ಆಂಧ್ರಪ್ರದೇಶದಲ್ಲಿ)	336

8.	ಚಿತ್ರದುರ್ಗ - ಹೊಳಲ್ಕೆರೆ - ಹೊಸದುರ್ಗ - ಚಿಕ್ಕಮಗಳೂರು - ಮೂಡಿಗೆರೆ - ಬೆಳ್ತಂಗಡಿ - ಬಂಟ್ವಾಳ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	283
9.	ಧಾರವಾಡ - ಲೋಂಡಾ - ಅನ್‌ಮೋದ್ - ಪಣಜಿ (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	95
10.	ಪಡುಬಿದ್ರಿ - ಕಾರ್ಕಳ - ಶೃಂಗೇರಿ - ತೀರ್ಥಹಳ್ಳಿ - ಷಿಕಾರಿಪುರ - ಶಿರಾಳಕೊಪ್ಪ - ಹುಬ್ಬಳ್ಳಿ - ಬಾಗಲಕೋಟೆ - ಹುನಗುಂದ.	550
11.	ಶಿರಾ - (ಬೆಂಗಳೂರು - ಪೂನಾ ರಾಷ್ಟ್ರೀಯ ಹೆದ್ದಾರಿ 4) ಮಧುಗಿರಿ - ಗೌರಿಬಿದನೂರು - ಚಿಕ್ಕಬಳ್ಳಾಪುರ - ಚಿಂತಾಮಣಿ - ಶ್ರೀನಿವಾಸಪುರ - ಮುಳಬಾಗಲು (ಬೆಂಗಳೂರು-ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ನಂ. 4)	160
12.	ಚಿತ್ರದುರ್ಗ - ಶಿವಮೊಗ್ಗ - ಸಕಲೇಶಪುರ - ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ.	325
13.	ಬೆಂಗಳೂರು - ಕನಕಪುರ - ಮಳವಳ್ಳಿ - ನಂಜನಗೂಡು - ಸುಲ್ತಾನಬತ್ತೇರಿ - ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ.	250
	ಒಟ್ಟು ಉದ್ದ	**4400**